ದಿನಾಂಕಃ **08-01-2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಕೆ ಬಿಎಲ್ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ಅಂಶಗಳನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಹೇಳಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಾವೆಗೆ ಸಂಬಂಧಿಸಿದಂತೆ ಈ ಕೆಳಗಿನ ದಾಖಲಾತಿಗಳನ್ನು ಹಾಜರು ಮಾಡುತ್ತಿದ್ದು ಸದರಿ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಳ್ಳಲು ಕೋರುತ್ತೇನೆ.

1. ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ 2000-01 ನೇ ಸಾಲಿನ ಆಸ್ತಿ ತೆರಿಗೆ ಧೃಡೀಕೃತ ರಿಜಿಸ್ಟರ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-5 ಎಂದು ಗುರುತಿಸಲಾಗಿದೆ.

ದಾವಾ ಸ್ವತ್ತಿಗೆ ಸಂಬಂಧಪಟ್ಟಿರುವ ಮತ್ತೊಂದು ಆಸ್ತಿ ತೆರಿಗೆ ಧೃಡೀಕೃತ ರಿಜಿಸ್ಟರ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಗಿದೆ.

ಪ್ರತಿವಾದಿಗಳ ಕುಟುಂಬಕ್ಕೆ ಸೇರಿದ ನೋಟರೈಸಡ್ ವಂಶವೃಕ್ಷದ ಪ್ರತಿಯನ್ನು ನಿಡಿ-7 ಎಂದು ಗುರುತಿಸಲಾಯಿತು.

5 ನೇ ಪ್ರತಿವಾದಿಯ ಚಿಕ್ಕಮ್ಮನ ಮರಣ ಶಾಸನ ಪತ್ರದ ಧೃಡೀಕೃತ ಪ್ರತಿಯ್ನನ್ನು ನಿಡಿ8 ಎಂದು ಗುರುತಿಸಲಾಯಿತು.

5 ನೇ ಪ್ರತಿವಾದಿಯ ಚಿಕ್ಕಪ್ಪನ ಮರಣ ಶಾಸನ ಪತ್ರದ ಧೃಡೀಕೃತ ಪ್ರತಿಯ್ನನ್ನು ನಿಡಿ9 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ನನ್ನ ಪರವಾಗಿ ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು
ತಿಪಟೂರು.